ಪಿಡಬ್ಲ್ಯೂ.1: ಗೋವಿಂದರಾಜು ಕೆ.ಎಂ.,

ದಿನಾಂಕಃ 26.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಎಸ್.ಎಲ್.ವಿ ಡ್ರೈ ಕಟ್ಟರ್ ಎಂಬ ಹೆಸರಿನಲ್ಲಿ ಗಾರ್ಮೆಂಟ್ಸ್ ಗಳಿಗೆ ಕಚ್ಚಾವಸ್ತುಗಳನ್ನು ಸರಬರಾಜು ಮಾಡುವ ವ್ಯವಹಾರ ಮಾಡುತ್ತಿದ್ದೆನು. ಆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ನನ್ನ ವ್ಯವಹಾರಕ್ಕೂ ಪ್ರಕರಣಕ್ಕು ಯಾವುದೇ ಸಂಬಂಧ ಇರುವುದಿಲ್ಲ, ಆರೋಪಿ ನನ್ನಿಂದ ನಗದಾಗಿ ಸಾಲ ಪಡೆದುಕೊಂಡಿದ್ದರು. ಎಸ್.ಎಲ್.ವಿ ಡ್ರೈ ಕಟ್ಟರ್ ಅನ್ನು ನಾನು ಸ್ವಂತ ಕಟ್ಟಡದಲ್ಲಿ ನಡೆಸುತ್ತಿದ್ದೆನು.

**2.** ಆರೋಪಿ ಸುಂಕದಕಟ್ಟೆಯಲ್ಲಿ ಎಸ್.ಎಲ್.ವಿ ಎಂಬ ಹೆಸರಿನಲ್ಲಿ ಗಾರ್ಮೆಂಟ್ಸ್ ನಡೆಸುತ್ತಿದ್ದರು. ನಾನು ಆರೋಪಿತರ ಗಾರ್ಮೆಂಟ್ಸ್‌ಗೆ ಕಚ್ಚಾವಸ್ತುಗಳನ್ನು ಸರಬರಾಜು ಮಾಡುತ್ತಿದ್ದೆನು. ಆರೋಪಿಯು ಕಚ್ಚಾವಸ್ತುಗಳನ್ನು ಖರೀದಿಸಿದಾಗ ನಗದು ರೂಪದಲ್ಲಿ ಹಣವನ್ನು ನೀಡುತ್ತಿದ್ದರು. ಆರೋಪಿ ಕಚ್ಚಾವಸ್ತುಗಳನ್ನು ಖರಿದಿ ಮಾಡಿರುವ ಬಗ್ಗೆ ಬಿಲ್ ಅಥವಾ ರಶೀದಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನಿಮ್ಮನ್ನು ಯಾವಾಗ ಹಣ ಕೇಳಿದರು ಎಂದರೆ ನಾನು ಹಣ ನೀಡಿದ ಒಂದು ತಿಂಗಳ ಮೊದಲು ಆರೋಪಿ ನನ್ನನ್ನು ಹಣ ಕೇಳಿದ್ದರು, ನಿರ್ದಿಷ್ಟ ದಿನಾಂಕ ನನಗೆ ನೆನಪಿರುವುದಿಲ್ಲ. ನಾನು ಆರೋಪಿಗೆ ನಗದಾಗಿ ಹಣ ನೀಡಿದೆನು. ನಿಮ್ಮ ನೋಟೀಸು ಹಾಗೂ ಫಿರ್ಯಾದಿನಲ್ಲಿ ಎಲ್ಲಿಯೂ ಸಹ ಆರೋಪಿ ಗಾರ್ಮೆಂಟ್ಸ್ ನಡೆಸುತ್ತಿದ್ದು ನಾನು ಅವರಿಗೆ ಕಚ್ಚಾ ಸರಕುಗಳನ್ನು ಸರಬರಾಜು ಮಾಡಿದೆನು ಎಂದು ಹೇಳಿರುವುದಿಲ್ಲ ಎಂದರೆ ಸರಿ.

**3.** ಆರೋಪಿಗೆ ಹಣ ನೀಡಿದಾಗ ಅವರಿಂದ ಯಾವ ದಾಖಲೆಗಳನ್ನು ಪಡೆದುಕೊಂಡಿದ್ದೀರಿ ಎಂದರೆ ಆರೋಪಿಯಿಂದ ಚೆಕ್ಕು ಪಡೆದುಕೊಂಡಿದ್ದೆನು ಎಂದು ನುಡಿಯುತ್ತಾರೆ. ಆರೋಪಿ ನಿಮಗೆ ಚೆಕ್ಕನ್ನು ಭದ್ರತೆಗಾಗಿ ನೀಡಿದ್ದರೋ ಅಥವಾ

**ಪಿಡಬ್ಲೂ.1: ಗೋವಿಂದರಾಜು ಕೆ.ಎಂ.,**

ಮರುಪಾವತಿಗಾಗಿ ನೀಡಿದ್ದರೋ ಎಂದರೆ ಸಾಕ್ಷಿಯು ನಾನು ಹಣವನ್ನು ಹಿಂದಿರುಗಿಸಿದಾಗ ಚೆಕ್ಕನ್ನು ಹಿಂದಿರುಗಿಸಿ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಆರೋಪಿ ಮೂರು ತಿಂಗಳೊಳಗಾಗಿ ಹಣ ನೀಡುತ್ತೇನೆ ಎಂದು ಹೇಳಿದರು ಆ ಅವಧಿಯಲ್ಲಿ ಹಣವನ್ನು ಹಿಂದಿರುಗಿಸುವಂತೆ ಆರೋಪಿಯನ್ನು ಕೇಳಿಕೊಂಡೆನು ಆಗ ಆರೋಪಿ ಚೆಕ್ಕನ್ನು ಹಾಜರುಪಡಿಸಿಕೊಳ್ಳಿ ಎಂದು ತಿಳಿಸಿದರು ಎಂದು ನುಡಿಯುತ್ತಾರೆ.

**4.** ಆರೋಪಿ ಮೊದಲನೆ ಬಾರಿ ಪಡೆದುಕೊಂಡಂತಹ ಸಾಲವನ್ನು ಮರುಪಾವತಿಸದೆ ಇದ್ದರೂ ಎರಡನೇ ಬಾರಿ ನೀವು ಸಾಲ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸಾಕ್ಷಿಯು ಆರೋಪಿ ನನ್ನಿಂದ ಹಣ ಪಡೆದುಕೊಂಡ 8 ದಿನಗಳಲ್ಲಿ ಪುನಃ ಹಣ ಕೇಳಿದ ಕಾರಣ ನೀಡಿದ್ದೆನು ಎಂದು ನುಡಿಯುತ್ತಾರೆ. ಆರೋಪಿ ಎರಡು ಬಾರಿ ಪಡೆದುಕೊಂಡಂತಹ ಹಣವನ್ನು ಮರುಪಾವತಿ ಮಾಡಿದ್ದರೇ ಎಂದರೆ ಸಾಕ್ಷಿಯು ಮಾಡಿರಲಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.